ಅಧಿಕ ಮಳೆಯಿಂದಾಗಿ ದೇವನಹಳ್ಳಿ ತಾಲ್ಲೂಕಿನಲ್ಲಿ ಮನೆಗಳು ಹಾನಿಯಾಗಿರುವ ಬಗ್ಗೆ

೩೦೩. **ಶ್ರೀ ಪಿ. ಸಿ. ವಂಸಿಸ್ವಾವಂಯ್ಯ (ದೇವನಹಳ್ಳಿ).**—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಧಿಕ ಮಳೆಯಿಂದಾಗಿ ದೇವನಹಳ್ಳಿ ತಾಲ್ಲೂಕಿನಲ್ಲಿ ಅನೇಕ ಮನೆಗಳು ಬಿದ್ದು ಹೋಗಿರುವುದು ಮತ್ತು ಬೆಳೆಗಳು ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ದೇವನಹಳ್ಳಿ ತಾಲ್ಲೂಕಿನಲ್ಲಿ ಆದ ಒಟ್ಟು ಅಂದಾಜಿನ ನಷ್ಟವೆಷ್ಟು?

ಇ) ನೊಂದ ವ್ಯಕ್ತಿಗಳಿಗೆ ಬಿಡುಗಡೆ ಮಾಡಿರುವ ಹಣದ ಮೊತ್ತವೆಷ್ಟು?

ಈ) ದೇವನಹಳ್ಳಿ ತಾಲ್ಲೂಕಿನಲ್ಲಿ ಬಿದ್ದ ಮಳೆಯಿಂದಾಗಿ ಮನೆಗಳನ್ನು ಕಳೆದುಕೊಂಡ ಎಲ್ಲಾ ವ್ಯಕ್ತಿಗಳಿಗೆ ಜನತಾ ಮನೆಗಳನ್ನು ಕಟ್ಟಿಸಿ ಕೊಡಲು ಸರ್ಕಾರವು ಕ್ರಮ ಕೈಗೊಳ್ಳುತ್ತದೆಯೆ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಅಧಿಕ ಮಳೆಯಿಂದಾಗಿ ದೇವನಹಳ್ಳಿ ತಾಲ್ಲೂಕಿನಲ್ಲಿ ೧೨೦ ಗುಡಿಸಲುಗಳು ಬಿದ್ದು ಹೋಗಿರುತ್ತವೆ. ಆದರೆ ಬೆಳೆಗಳಿಗೆ ನಷ್ಟ ಆಗಿರುವುದಿಲ್ಲ.

ಆ) ಗುಡಿಸಲುಗಳು ಬಿದ್ದು ೬೦,೦೦೦.೦೦ ರೂಪಾಯಿಗಳ ನಷ್ಟ ಉಂಟಾಗಿದೆ.

ಇ) ೧೭,೨೦೦.೦೦ ರೂಪಾಯಿಗಳು.

ಈ) ಈ ಗುಡಿಸಲು ನಿವಾಸಿಗಳು ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಸೇರಿರುವುದರಿಂದ ಈಗಾಗಲೇ ಚಾಲ್ತಿಯವರ ಜನತಾ ಹೌಸಿಂಗ್ ಯೋಜನೆ ಅಡಿ ಇರುವ ಸೌಲಭ್ಯವನ್ನು ಪಡೆಯಬಹುದು.

೨. ಚುನಾವಣಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿ ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೆ, ೧೯೭೬ನೇ ಇಸವಿಯ ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳ ಶಾಸನದ ೨೧ (೧೫)ನೇ ಕಲಮಿನ ಮೇರೆಗೆ ಅವಶ್ಯ ಪಡಿಸಿರುವಂತೆ ವಿಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯಂ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ಐದು ಜನ ಸದಸ್ಯರುಗಳನ್ನು ಚುನಾಯಿಸಬೇಕೆಂದು ಮುಖ್ಯ ಮಂತ್ರಿಗಳಾದ ಶ್ರೀ ಎಸ್. ಆರ್. ಬೊಮ್ಮಾಯಿಯವರ ಪರವಾಗಿ ನಾನು ಸೂಚಿಸುತ್ತೇನೆ.

ಅಧ್ಯಕ್ಷರಂ.— ಪ್ರಸ್ತಾವ ಏನೆಂದರೆ, ೧೯೭೬ನೇ ಇಸವಿಯ ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳ ಶಾಸನದ (೨೧) ೧೫ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ವಿಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯಂ ಗುಲ್ಬರ್ಗ ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ಐದು ಜನ ಸದಸ್ಯರುಗಳನ್ನು ಚುನಾಯಿಸುವುದು.— ಪ್ರಸ್ತಾವನೆಯನ್ನು ಮಂಡಿಸಲಾಯಿತು.

ಪ್ರಕಟಣೆ

ಅಧ್ಯಕ್ಷರು.— ೧೯೮೬ನೇ ಸಾಲಿನ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕಕ್ಕೆ ಸಂಭಂಧಿಸಿದಂತೆ ಗಚಿಸಲಾದ ಜಂಟೀ ಪರಿಶೀಲನಾ ಸಮಿತಿಯು ತನ್ನ ವರದಿಯನ್ನು ಒಪ್ಪಿಸಲು ೧೯೮೮ನೇ ಡಿಸೆಂಬರ್ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಲು ದಿನಾಂಕ: ೩೦-೯-೮೮ರ ಪತ್ರದಲ್ಲಿ ಕೋರಿತ್ತು. ಅದರಂತೆ ವರದಿಯನ್ನು ಒಪ್ಪಿಸಲು ಕಾಲಾವಧಿಯನ್ನು ಡಿಸೆಂಬರ್ ೧೯೮೮ರ ಅಂತ್ಯದವರೆಗೆ ವಿಸ್ತರಿಸಲಾಗಿದೆಯೆಂದು ಸಭೆಯ ಗಮನಕ್ಕೆ ತರಬಯಸುತ್ತೇನೆ.